# ಚಿತ್ರಕಲೆ ಜೊತೆ ಪರಿಸರ ಕಾಳಜಿ

**ಓದಿದ್ದು ತಾಂತ್ರಿಕ ವಿಷಯದಲ್ಲಿ ಡಿಪ್ಲೊಮ. ಹವ್ಯಾಸವಾಗಿ ಬೆಳೆಸಿಕೊಂಡದ್ದು ಚಿತ್ರಕಲೆ. ಜೊತೆಗೆ ಸಂಗೀತ, ಪರಿಸರ ಕಾಳಜಿ ಎಲ್ಲವನ್ನೂ ಮೈಗೂಡಿಸಿಕೊಂಡ ಬೆಂಗಳೂರಿನ ಚಾಮರಾಜಪೇಟೆಯ ಎಂ. ಶ್ರೀಧರ್, ಪೆನ್ಸಿಲ್ ಸ್ಕೆಚ್, ವಾಟರ್‌ಕಲರ್ ಎಲ್ಲದರಲ್ಲೂ ಅತ್ಯುತ್ತಮ ಚಿತ್ರ ಬರೆದು ಹೆಸರು ಮಾಡುತ್ತಿದ್ದಾರೆ.**

■ ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ಕಲಿತ ವಿದ್ಯೆಗೂ ಹವ್ಯಾಸಿ ಕಲೆಗೂ ಏನಾದರೂ ಸಂಬಂಧವಿದೆಯೇ? ತಾಂತ್ರಿಕ ಅಧಿಕಾರಿಯಾದರೂ ಕಲೆಯನ್ನು ಆರಾಧಿಸಬಾರದೇಕೆ ಎಂಬ ಪ್ರಶ್ನೆಗೆ ಈ ಕಲಾವಿದರೇ ಅತ್ಯುತ್ತಮ ನಿದರ್ಶನ. ಏಕೆಂದರೆ ಓದಿರುವುದು ತಾಂತ್ರಿಕತೆಗೆ ಸಂಬಂಧಿಸಿದ ಡಿಪ್ಲೊಮಾ. ಚಿಕ್ಕ ವಯಸ್ಸಿನಲ್ಲಿಯೇ ಚಿತ್ರಕಲೆ ಬಿಡಿಸುವ ಆಸಕ್ತಿಯನ್ನು ಬೆಳೆಸಿಕೊಂಡವರು. ಪೆನ್ಸಿಲ್‌ನಿಂದ ಬಿಡಿಸುತ್ತಿದ್ದ ಚಿತ್ರಗಳು ಚೆನ್ನಾಗಿ ಮೂಡಿ ಬರುತ್ತಿರಲಿಲ್ಲ. ಆದರೂ ಚಿತ್ರಕಲೆಯನ್ನು ಕರಗತ ಮಾಡಿಕೊಳ್ಳಬೇಕೆಂಬ ಛಲ ಕಡಿಮೆಯಾಗಲಿಲ್ಲ. ಇವರೇ ಚಿತ್ರಕಲಾವಿದ ಬಿ. ಶ್ರೀಧರ್.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಭೀಮಾರಾವ್‌ಧನಲಕ್ಷ್ಮಿ ದಂಪತಿಯ ಮಗನಾದ ಬಿ.ಶ್ರೀಧರ್ ಅವರು ರಕ್ಷಣಾ ಮಂತ್ರಾಲಯದ ಜಿ.ಟಿ.ಆರ್.ಇಯಲ್ಲಿ ತಾಂತ್ರಿಕ ಅಧಿಕಾರಿ ಆಗಿ ಕೆಲಸ ಮಾಡುತ್ತಿದ್ದಾರೆ. ಶಾಲಾ ದಿನಗಳಲ್ಲಿ ಇವರ ಕಲಿಯುವ ಆಸೆ ಕೈಗೂಡಲಿಲ್ಲ, ಸರ್ಕಾರಿ ನೌಕರಿ ಸಿಕ್ಕಿದ ನಂತರ 38ನೇ ವಯಸ್ಸಿನಲ್ಲಿ ಅಂದರೆ 2003ರಿಂದ ಹೆಚ್ಚೆಚ್ಚು ತೊಡಗಿಸಿಕೊಂಡು ತಾವೇ ಸತತ ಪ್ರಯತ್ನದಿಂದ ಚಿತ್ರಕಲೆಯನ್ನು ಬರೆಯಲಾರಂಭಿಸಿದರು.

ಚಿತ್ರಗಳು ಇನ್ನು ವೃತ್ತಿಪರವಾಗಿರಲೆಂದು ಕ್ರಿ.ಶ.2009ರಿಂದ ಕಲಾಶಿಕ್ಷಕಿ ವೀಣಾ ಅವರ ಮೊದಲ ಶಿಷ್ಯನಾಗಿ ತರಬೇತಿ ಪಡೆದು ಇಂದು ಪೆನ್ಸಿಲ್ ಸ್ಕೆಚ್, ಪೋಸ್ಟರ್ ಕಲರ್, ವಾಟರ್ ಕಲರ್‌ಗಳನ್ನು ಹ್ಯಾಂಡ್‌ಮೇಡ್ ಪೇಪರ್‌ನಲ್ಲಿ ಮಾಡುತ್ತಾರೆ. ಆಯಿಲ್, ಅಕ್ರಲಿಕ್ ಪೇಂಟಿಂಗ್‌ಗಳನ್ನು ಕ್ಯಾನ್ವಾಸ್‌ನಲ್ಲಿ ಮಾಡುತ್ತಾರೆ. ಇವರ ಚಿತ್ರಕಲೆಯಲ್ಲಿ ಭಾವನಾತ್ಮಕತೆ, ಮುಖಭಾವ, ಅಭಿವ್ಯಕ್ತಿ, ಶಿಲ್ಪಕಲೆ ಹೆಚ್ಚಾಗಿ ಕಾಣುತ್ತವೆ.

ಇವರ ಚಿತ್ರಕಲೆಯಿಂದ ದ.ರಾ.ಬೇಂದ್ರೆ, ಎಂ.ಎಸ್. ಸುಬ್ಬಲಕ್ಷ್ಮಿ, ಸರ್.ಎಂ. ವಿಶ್ವೇಶ್ವರಯ್ಯ, ಸ್ವಾಮಿ ವಿವೇಕಾನಂದ, ಲೇಪಾಕ್ಷಿಯ ಶಿಲ್ಪಕಲೆ ಮತ್ತು ನಂದಿ, ನಿಸರ್ಗ ಸಂಬಂಧಿತ ಇನ್ನು ಹಲವಾರು ಮೂಡಿಬಂದಿವೆ. 2003ರಿಂದ 500ಕ್ಕೂ ಹೆಚ್ಚು ಪೆನ್ಸಿಲ್ ಸ್ಕೆಚ್‌ಗಳನ್ನು ಬಿಡಿಸಿದ್ದಾರೆ. 2009ರಿಂದ ಇಲ್ಲಿಯವರೆಗೂ 300ಕ್ಕೂ ಹೆಚ್ಚು ಚಿತ್ರಕಲೆಗಳಲ್ಲಿ

